# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ನಿಗಮ ಕಾರ್ಯಾಲಯ,
ನಂ.29, ವಿಜಯನಗರ 2ನೇ ಹಂತ
ಹಿನಕಲ್, ಮೈಸೂರು-17
CIN:U40109KA2004SGC035177

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)
ಕಾರ್ಯ ಮತ್ತು ಪಾಲನೆ ಉಪ ವಿಭಾಗ,ಬನ್ನೂರು
ದೂರವಾಣಿ ಸಂಖ್ಯೆ : 08227 275506/07
E-Mail ID : cescbannur@gmail.com

ದಿನಾಂಕ 26.06.2020 ರಂದು ಬೆಳಗ್ಗೆ 11.00 ಗಂಟೆಗೆ **ಕಾರ್ಯನಿರ್ವಾಹಕ ಇಂಜಿನಿಯರ್** (ವಿ) ಕಾ ಮತ್ತು ಪಾ ವೃತ್ತ, ಮೈಸೂರು ರವರ ಅಧ್ಯಕ್ಷತೆಯಲ್ಲಿ ಬನ್ನೂರು ಉಪ-ವಿಭಾಗದಲ್ಲಿ ನಡೆದ ಜನ ಸಂಪರ್ಕ ಸಭೆಯ ನಡಾವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು / ನೌಕರರುಗಳು.**

| | |
|---|---|
| ಶ್ರೀ ರಮೇಶ್ ಹೆಚ್ ಕೆ, | ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ನಂಜನಗೂಡು. |
| ಶ್ರೀ ಮಹದೇವಯ್ಯ ಎಸ್ | ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ) ಚಾವಿಸನಿನಿ, ಕಾ ಮತ್ತು ಪಾ ಉಪವಿಭಾಗ, ಬನ್ನೂರು |
| ಶ್ರೀ ಹರೀಶ್ ಜಿ | ಸ.ಇಂ (ವಿ) ಬನ್ನೂರು ಪಟ್ಟಣ ಶಾಖೆ ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀಮತಿ ನಾಗವೇಣಿ ಎಂ | ಸ.ಇಂ (ವಿ) ತಾಂತ್ರಿಕ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ವಿಶ್ವನಾಥ್ ಎಸ್. ಎಲ್. | ಸ.ಇಂ (ವಿ) ತುಂಬಲ ಶಾಖೆ, ಚಾಮನಹಳ್ಳಿ ಶಾಖೆ (ಪ್ರಭಾರ), ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ಶ್ರೀನಿವಾಸ್ ಟಿ. ವಿ. | ಸ.ಇಂ (ವಿ) ಕೇತುಪುರ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |
| ಶ್ರೀ ರವೀಂದ್ರ. ಹೆಚ್. | ಕಿ.ಇಂ (ವಿ) ಮಾದಿಗಹಳ್ಳಿ ಶಾಖೆ, ಚಾವಿಸನಿನಿ, ಬನ್ನೂರು ಉಪವಿಭಾಗ |

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ)(ಪ್ರಭಾರ), ಆದ ಶ್ರೀ ಹರೀಶ್ ಜಿ. ರವರು ಹಾಜರಿದ್ದ ಅಧಿಕಾರಿ / ನೌಕರರುಗಳನ್ನು, ರೈತ ಮುಖಂಡರು, ರೈತರು ಹಾಗೂ ವಿದ್ಯುತ್ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ದಿನಾಂಕ : 26.02.2020 ನಡೆದ ಜನ ಸಂಪರ್ಕ ಸಭೆಯಲ್ಲಿ ಸ್ವೀಕರಿಸಿದ ದೂರುಗಳ ಬಗ್ಗೆ ಮಾನ್ಯ **ಕಾರ್ಯನಿರ್ವಾಹಕ ಇಂಜಿನಿಯರ್ (ವಿ)**, ರವರು ಕೂಲಂಕುಷವಾಗಿ ಪರಿಶೀಲಿಸಿ, 06 ದೂರುಗಳಲ್ಲಿ 05 ದೂರುಗಳನ್ನು ಸರಿಪಡಿಸಲಾಗಿದ್ದು ಮತ್ತು 01 ದೂರುಗಳನ್ನು ಶೀಘ್ರವಾಗಿ ಸರಿಪಡಿಸಲು ಕ್ರಮ ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಉಪವಿಭಾಗಾಧಿಕಾರಿಯವರಿಗೆ ಮತ್ತು ಶಾಖಾಧಿಕಾರಿಗಳಿಗೆ ಸೂಚಿಸಿದರು. ನಂತರ ಸಭೆಯಲ್ಲಿ ಹಾಜರಿದ್ದ ರೈತಮುಖಂಡರು, ರೈತರು, ಗ್ರಾಹಕರು ಮತ್ತು ಸಾರ್ವಜನಿಕರಿಂದ ಮೌಖಿಕವಾಗಿ/ಲಿಖಿತವಾಗಿ ದೂರುಗಳನ್ನು ಸ್ವೀಕರಿಸಲಾಯಿತು.

ಈ ಕೆಳಕಂಡ ದೂರುಗಳನ್ನು ಸ್ವೀಕರಿಸಿ ಅದನ್ನು ಸರಿಪಡಿಸುವ ಬಗ್ಗೆ ಚರ್ಚಿಸಲಾಯಿತು.

| ಕ್ರ. ಸಂ | ದೂರುದಾರರ ವಿವರ | ವಿಷಯ | ಕ್ರಮ |
|---|---|---|---|
| 1. | ಶ್ರೀ ರಂಗಸ್ವಾಮಿ, ಕುಳ್ಳನಕೊಪ್ಪಲು 9902312275 | ಇವರ ಮನೆಗೆ ವಿದ್ಯುತ್ ಸಂಪರ್ಕಕ್ಕಾಗಿ ಅಜಿತ ದೂರು ಸಲ್ಲಿಸಿದರು | ನಿಗಮದ ನಿಯಮಾನುಸಾರ ಅರ್ಜಿ ಸಲ್ಲಿಸಿ ವಿದ್ಯುತ್ ಸಂಪರ್ಕ ಪಡೆಯಲು ಸೂಚಿಸಿದರು. |
| 2. | ಶ್ರೀ ನಾರಾಯಣ, ರೈತ ಸಂಘ ಮುಖಂಡರು, 9448055920 | ಬೀದಿ ದೀಪಗಳು ಹಗಲಿನಲ್ಲಿ ಉರಿಯುವುದರ ಜೊತೆ ನೇರ ಸಂಪರ್ಕದಲ್ಲಿರುವದನ್ನು ತೆಗೆಯಬೇಕೆಂದು ಪಂಚಾಯ್ತಿ ಕಛೇರಿಗಳಿಗೆ ಪತ್ರ ಬರೆಯಬೇಕೆಂದು ಮನವಿ ಮಾಡಿದರು.<br>ವಿದ್ಯುತ್ ಮಾರ್ಗಗಳ ಕೆಳಗೆ ಮರ ಗಿಡಗಳನ್ನು ಬೆಳೆಸುವುದರಿಂದ ಆಗುವ ತೊಂದರೆ ಮತ್ತು ದೂರುಗಳ ಬಗ್ಗೆ ಅರಣ್ಯ ಇಲಾಖೆಯವರಿಗೆ ಪತ್ರ ಬರೆದು ಮುಂದೆ ವಿದ್ಯುತ್ ಮಾರ್ಗಗಳ ಕೆಳಗೆ ಗಿಡಗಳನ್ನು ನೆಡುವುದನ್ನು ನಿಲ್ಲಿಸುವಂತೆ ತಿಳಿಸಬೇಕು ಎಂದು ಮನವಿ ಮಾಡಿದರು. | ಈಗಾಗಲೆ ಪತ್ರ ಬರೆಯಲಾಗಿದೆ ಮತ್ತೊಮ್ಮೆ ಬರೆಯಲಾಗುವುದೆಂದು ತಿಳಿಸಿದರು |
| 3. | ಶ್ರೀ ಚಿಕ್ಕರಸೇಗೌಡ, ವಿದ್ಯುತ್ ಗುತ್ತಿಗೆದಾರರು. | 11ಕೆವಿ ಕೇತುಪುರ ನಿರಂತರ ಜ್ಯೋತಿ ಫೀಡರ್‌ನ ವಿದ್ಯುತ್ ಸರಬರಾಜಿನಲ್ಲಿ ತುಂಬ ಅಡಚಣೆಗಳಾಗುತ್ತಿದ್ದು ಸರಿಯಾಗಿ ವಿದ್ಯುತ್ ಸರಬರಾಜಾಗುತ್ತಿಲ್ಲವೆಂದು ದೂರಿದರು. | ಕೇತುಪುರ ಶಾಖಾಧಿಕಾರಿಗಳಿಗೆ ಮಾರ್ಗ ನಿರ್ವಹಣೆ ಮಾಡಲು ಶಾಖಾಧಿಕಾರಿಗಳಿಗೆ ತಿಳಿಸಿದರು |
| 4. | ಶ್ರೀ ಮಲ್ಲೇಗೌಡ, ಬೇವಿನಹಳ್ಳಿ | ಸುಟ್ಟು ಹೋಗಿರುವ ಬೇವಿನಹಳ್ಳಿ ಊರಿನ 100ಕೆವಿಎ ಪರಿವರ್ತಕವನ್ನು ಬದಲಾಯಿಸಿರುವುದಿಲ್ಲವೆಂದು ದೂರಿದರು. | ಬದಲಾಯಿಸಲಾಗಿದೆ. |
| 5. | ಶ್ರೀ ಶ್ರೀ ರಂಗಸ್ವಾಮಿ ಮೇಘಳಕೊಪ್ಪಲು, 9191558087 | ಕುಂತನಹಳ್ಳಿ ಶಾಲಾ ಆವರಣದ ಒಳಗಡೆ ವಿದ್ಯುತ್ ಕಂಬವನ್ನು ಸ್ಥಳಾಂತರಿಸುವಂತೆ ತಿಳಿಸಿರುತ್ತಾರೆ. | ಚಾಮನಹಳ್ಳಿ ಶಾಖಾಧಿಕಾರಿಗಳಿಗೆ ಸ್ಥಳಪರಿಶೀಲಿಸಿ ಅಂದಾಜು ಪಟ್ಟಿ ತಯಾರಿಸಲು ಸೂಚಿಸಿದರು. |
| 6. | ಶ್ರೀ ಶ್ರೀ ಕೃಷ್ಣೇಗೌಡ, ಮೇಘಳಕೊಪ್ಪಲು, 7349359499 | ಸುಟ್ಟು ಹೋಗಿರುವ 63ಕೆವಿಎ ಪರಿವರ್ತಕವನ್ನು ಬದಲಾಯಿಸಿರುವುದಿಲ್ಲವೆಂದು ದೂರಿದರು. | ಬದಲಾಯಿಸಲಾಗಿದೆ. |
| 7. | ಶ್ರೀ ಮಹದೇವ ಬಿನ್ ಮಸಣೇಗೌಡ, ಪುಟ್ಟರಾಜು ಬಿನ್ ಮಸಣೇಗೌಡ, ಕುಪ್ಯಾ, 9743331477 | ಇವರ ಕೊಳವೆಬಾವಿಗೆ ಗಂಗಾಕಲ್ಯಾಣ ಯೋಜನೆಯಡಿಯಲ್ಲಿ ಮಂಜೂರಾಗಿರುವ ವಿದ್ಯುತ್ ಕಾಮಗಾರಿಯ ಕೆಲಸ ಮಾಡಿಸುವ ಬಗ್ಗೆ ಅಜಿತ ದೂರು ಸಲ್ಲಿಸಿದರು | PTK ಆಧಾರದಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಎಲೆಕ್ಟ್ರಿಕಲ್ಸ್ ರವರಿಗೆ ವಹಿಸಲಾಗಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ |

Mahadevaiah

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಬನ್ನೂರು

ಕ್ರಮ ಸಂಖ್ಯೆ : ಸ.ಕಾ.ನಿ (ವಿ)/ಹಿಸ/ಬ/2020-21/ 249-56 ದಿನಾಂಕ : 26.06.2020

ಪ್ರತಿಗಳು.

- ಮುಖ್ಯ ಇಂಜನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಅಧೀಕ್ಷಕ ಇಂಜನಿಯರ್(ವಿ), ಚಾವಿಸನಿನಿ., ಕಾ ಮತ್ತು ಪಾ ವೃತ್ತ, ಮೈಸೂರು ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಕಾರ್ಯನಿರ್ವಾಹಕ ಇಂಜನಿಯರ್ (ವಿ), ಚಾವಿಸನಿನಿ., ನಂಜನಗೂಡು, ರವರ ಕೃಪ ಅವಗಾಹನೆಗಾಗಿ ಸಲ್ಲಿಸಲಾಗಿದೆ.
- ಎಲ್ಲಾ ಶಾಖಾಧಿಕಾರಿಗಳು/ ಹಿರಿಯ ಸಹಾಯಕ/ ಮುಖ್ಯ ಕಡತಕ್ಕೆ.